ಮಾಡಿರುವ ಅಮೌಂಟ್ ನಾಲ್ಕು ಲಕ್ಷ ಎಪ್ಪತ್ತು ಸಾವಿರ ಆಗಿದೆ. ಇವೊತ್ತಿಗೆ ಬಿಲ್ ಅಮೌಂಟ್ ಆರು ಲಕ್ಷ ಇಪ್ಪತ್ತು ಸಾವಿರ ತೋರಿಸ್ತಿದೆ. ಇವೊತ್ತು ಒಂದು ಲಕ್ಷವಾದರೂ ಡಿಪಾಸಿಟ್ ಮಾಡಿದರೆ ಒಳ್ಳೆಯದಿತ್ತು. ಇಷ್ಟಕ್ಕೂ ನೀವ್ಯಾಕೆ ನಿಮ್ಮ ಹೆಂಡತಿಯ ಹೆಸರಲ್ಲಿ ಹೆಲ್ತ್ ಇನ್ಶೂರೆನ್ಸ್ ಮಾಡಿಸಲಿಲ್ಲ. ಇಂಥ ಸಮಯದಲ್ಲಿ ಎಷ್ಟು ಸಹಾಯ ಆಗಿರೋದು' ಎಂದು ಕರುಣೆಯನ್ನು ಕರುಳಿನಾಳದಿಂದ ಹೊರಹಾಕಿದ್ದರು. 'ನಾಳೆ ಆರೆಂಜ್ ಆಗ್ತಿದೆ. ಖಂಡಿತಾ ನಾಳೆ ಮಧ್ಯಾಹ್ನದೊಳಗೆ ಡಿಪಾಸಿಟ್ ಮಾಡ್ತೀನಿ ಮೇಡಮ್' ಎಂದು ಎದ್ದು ನಿಂತೆ. 'ಪ್ಲೀಸ್ ಸರ್, ಹ್ಯಾವ್ ಇಟ್ ಇನ್ ಮೈಂಡ್' ಎಂದು ಮುಖದ ತುಂಬಾ ನಗು ತುಂಬಿ ಹೇಳಿದ್ದರು. ನಾನು ಅಕೌಂಟ್ಸ್ ಆಫೀಸರ್ ಚೇಂಬರ್‌ನಿಂದ ಹೊರ ಬಂದಾಗ ಯುವತಿಯೊಬ್ಬಳು ಕ್ಯಾಶ್ ಕೌಂಟರ್ ಬಳಿ ಜೋರಾಗಿ ಕೂಗಾಡುತ್ತಿರುವುದು ಕಾಣಿಸಿತು. ಸುಮಾರು ಜನ ಸುತ್ತಲೂ ನೆರೆದಿದ್ದರು. ಗಲಾಟೆ ಕೇಳಿಸಿಕೊಂಡ ಅಕೌಂಟ್ಸ್ ಆಫೀಸರ್ ಮೇಡಮ್ ಅಲ್ಲಿಗೆ ಬಂದು ನಗುತ್ತಾ ಆ ಯುವತಿಯನ್ನು ಸಮಾಧಾನ ಮಾಡುತ್ತಾ ಕೈ ಹಿಡಿದು ತಮ್ಮ ಚೇಂಬರ್‌ಗೆ ಕರೆದುಕೊಂಡು ಹೋಗಿದ್ದರು. ಜನ ಚದುರಿದರು. ಅಲ್ಲೇ ನಿಂತಿದ್ದ ಮಧ್ಯವಯಸ್ಕ ವ್ಯಕ್ತಿಯೊಬ್ಬರು ನನ್ನನ್ನು ನೋಡಿ 'ನೋಡಿ ಸಾರ್ ಈ ಆಸ್ಪತ್ರೆಯೋರೂ ಆ ಇನ್ಸುರೆನ್ಸ್ ಕಂಪನಿಯೋರೂ ಮಿಂಗಲ್ ಆಗಿ ಎಂಥ ಅನ್ಯಾಯ ಮಾಡ್ತಾರೆ. ಪಾಪ ಆ ಹುಡುಗಿಯ ಅಮ್ಮನನ್ನ ಕೋವಿಡ್ ಅಂಥ ಮೊನ್ನೆ ದಿನ ಸೇರಿಸಿದ್ದಂತೆ. ಅದು ನೆಗೆಟಿವ್ ಅಂತ ರಿಸಲ್ಟ್ ಬಂದು ಇವೊತ್ತು ಡಿಸ್ಚಾರ್ಜ್ ಮಾಡ್ತಿದಾರೆ. ಡಿಸ್ಚಾರ್ಜ್ ಸಮ್ಮರಿಯಲ್ಲಿ ಟ್ರೀಟ್ಮೆಂಟ್ ಅಮೌಂಟ್ ಎರಡು ಲಕ್ಷ ತೋರಿಸ್ತಾ ಇದ್ರೆ, ಬಿಲ್‌ನಲ್ಲಿ ಎರಡು ಲಕ್ಷ ಎಂಬತ್ತು ಸಾವಿರ ಇನ್ಸುರೆನ್ಸ್ ಅಮೌಂಟ್ ಕಟ್ ಮಾಡಿದಾರಂತೆ. ಪಾಪ ಹುಡುಗಿ ಬುದ್ಧಿವಂತೆ, ಧೈರ್ಯವಂತೆ ಆಗಿದ್ದಕ್ಕೆ ಪರವಾಗಿಲ್ಲ. ಪ್ರತಿದಿನ ಇಂಥ ಎಷ್ಟು ದೋಖಾ ಕೇಸ್ ನಡಿತಾವೋ ಹೇಳೋರಿಲ್ಲ ಕೇಳೋರಿಲ್ಲ' ಎಂದು ಕೋಪ ವ್ಯಕ್ತಪಡಿಸಿದ್ದ.

ನಗುವಿನ ಮೂಲಕ ಈಗ ಮನುಷ್ಯ ವಂಚನೆ, ದ್ರೋಹ, ಲಾಭಕೋರತನ ಏನೆಲ್ಲವನ್ನೂ ಸುಲಭವಾಗಿ ಮಾಡಬಲ್ಲ ವಿದ್ಯೆಯನ್ನು ಕಲಿತಿದ್ದಾನೆ. ಮನುಷ್ಯ ದುಡ್ಡು ಮಾಡಲೆಂದು ವೇಗವಾಗಿ ಮಾನವೀಯತೆಯನ್ನು ಕಳೆದುಕೊಳ್ಳುತ್ತಿದ್ದಾನೆ. ಇದೆಲ್ಲಾ ಜಾಗತೀಕರಣದ ಪ್ರಭಾವ ಎಂದು ಯೋಚಿಸುತ್ತಾ ಮಾಮೂಲಿ ಅಟೆಂಡರ್ಸ್ ಲಾಂಜ್ ಕಡೆ ನಡೆಯತೊಡಗಿದವನಿಗೆ ಹೊಟ್ಟೆ ಹಸಿದಂತಾಗಿತ್ತು. ಅರ್ಧ ಫರ್ಲಾಂಗ್ ದೂರವಿದ್ದ ಹೋಟೆಲ್ ದ್ವಾರಕಾ ಕಡೆ ನಡೆದಿದ್ದೆ. ಸುಖವಿರಲಿ, ದುಃಖವಿರಲಿ ಕರುಳು ಮಾತ್ರ ತನ್ನ ಕೆಲಸವನ್ನು ನಿಲ್ಲಿಸುವುದಿಲ್ಲ. ಪಕ್ಕದಲ್ಲಿ ಹೆಣವಿರಲಿ, ನಮ್ಮ ಕರುಳನ್ನು ತುಂಬಿಸಿಕೊಳ್ಳಲೇಬೇಕು. ಕರುಳು ಜೀವಜಗತ್ತಿನ ಅನನ್ಯ ಸೃಷ್ಟಿ. ಒಂದು ರವೆ ಇಡ್ಲಿ ತಿಂದು ಕಾಫಿ ಕುಡಿಯುತ್ತಿರಬೇಕಾದರೆ ಟೇಬಲ್ ಮೇಲೆ ಇಟ್ಟಿದ್ದ ಮೊಬೈಲ್ ರಿಂಗಾಗುವುದರೊಂದಿಗೆ ಆಸ್ಪತ್ರೆ ಹೆಸರು ಡಿಸ್‌ಪ್ಲೇ ಆಗುತ್ತಿತ್ತು. 'ಹಲೊ' ಎಂದ ನನ್ನ ಧ್ವನಿ ಸ್ವಾಧೀನ ಕಳೆದುಕೊಂಡು ನಡುಗುತ್ತಿತ್ತು. 'ಹಲೊ ಸರ್, ನಾನು ಐಸಿಯುವಿನ ಡ್ಯೂಟಿ ಡಾಕ್ಟರ್ ಜಮುನಾ. ನಿಮ್ಮನ್ನು ಅಟೆಂಡರ್ಸ್ ಲಾಂಜ್‌ನಲ್ಲಿ ಹುಡುಕಿಸಿದಿವಿ. ನೀವಲ್ಲಿ ಇರಲಿಲ್ಲ. ಸ್ವಲ್ಪ ಎಮರ್ಜೆನ್ಸಿ ಇತ್ತು ಅದಕ್ಕೆ ಫೋನ್ ಮಾಡಿದೆ. ನೀವು ಬೇಗ ಬರಲಿಕ್ಕೆ ಆಗುತ್ತಲ್ಲವ' ಎಂದಿದ್ದರು.

'ಮೇಡಮ್ ಜಸ್ಟ್ ದ್ವಾರಕಾಗೆ ಬಂದೆ. ಕಾಫಿ ಕುಡಿದು ಅಲ್ಲಿಗೇ ಬರ್ತಾ ಇದೀನಿ. ಅಕೌಂಟ್ಸ್ ಆಫೀಸರ್ ಹತ್ತಿರ ಮಾತನಾಡಿದಿನಿ. ನಾಳೆ ಸಾಧ್ಯವಾದಷ್ಟು ಡಿಪಾಸಿಟ್ ಮಾಡ್ತೀನಿ' ಎಂದೆ. 'ಸರ್ ಅದಕ್ಕಲ್ಲ ಮೇಡಮ್‌ಗೆ ಮತ್ತೆ ಮೂರು ನಿಮಿಷ ಕಾರ್ಡಿಯಾಕ್ ಅರೆಸ್ಟ್ ಆಗಿತ್ತು. ಕೂಡಲೇ ಸಿಪಿಆರ್ ಮಾಡಿದ್ದೀವಿ. ಅಲ್ಲದೆ ಆಟೋಮೇಟೆಡ್ ಎಕ್ಸ್‌ಟರ್ನಲ್ ಡಿಫಿಬ್ರಿಲ್ಲೇಟರ್ ಕೂಡಾ ಅಳವಡಿಸಿದಿವಿ. ಐ ಥಿಂಕ್ ಶಿ ಈಸ್ ಔಟ್ ಆಫ್ ಡೇಂಜರ್. ಸೀನಿಯರ್ ಡಾಕ್ಟರ್ ಎಲ್ಲಾ ಇಲ್ಲೆ ಇದಾರೆ. ಆಸ್ಪತ್ರೆಗೆ ರೀಚ್ ಆದ ತಕ್ಷಣ ಐಸಿಯುಗೆ ಬನ್ನಿ' ಎಂದು ಮಾತು ಮುಗಿಸಿದ್ದರು.

ಕೇವಲ ತಿಂಗಳ ಹಿಂದೆ ಎಷ್ಟೊಂದು ಲವಲವಿಕೆ, ಉತ್ಸಾಹಗಳನ್ನು ತುಂಬಿಕೊಂಡು ಓಡಾಡಿದ್ದಳು. ಸಮುದ್ರವೆಂದರೆ ಎಲ್ಲಿಲ್ಲದ ಬೆರಗು. ಏಳು ವರ್ಷಗಳ ಹಿಂದೆ ನಾನು ಕೆಲಸ ಮಾಡುತ್ತಿದ್ದ ಕರಾವಳಿಗೆ ಬಂದಿದ್ದಾಗ ನಾಲ್ಕು ದಿನಗಳ ಕಾಲ ಹೊನ್ನಾವರ, ಕುಮಟ, ಅಂಕೋಲಾ, ಗೋಕರ್ಣ, ಕಾರವಾರ ಕಡಲ ತೀರಗಳನ್ನು ಸುತ್ತಿಸಿದ್ದೆ. ಅಲ್ಲದೆ ಯಾಣ, ಉಂಚಳ್ಳಿ ಜಲಪಾತ, ಮಿರ್ಜಾನ ಕೋಟೆ, ಅಘನಾಶಿನಿ, ಸಹಸ್ರ ಲಿಂಗ, ಬನವಾಸಿ, ಶಿರಸಿ ಮಾರಿಕಾಂಬಾ ದೇವಸ್ಥಾನ